KAUK210014232023

**ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಂಕೋಲಾ , ಉತ್ತರ ಕನ್ನಡ**

-ಃಉಪಸ್ಥಿತರುಃ-

ಪ್ರಶಾಂತ ಬಾದವಾಡಗಿ
ಬಿ.ಎ.,ಎಲ್.ಎಲ್.ಬಿ., (ಸ್ಪೆ.)
ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,
ಅಂಕೋಲಾ.

ಮೂಲ ದಾವಾ ನಂಬರ : 90/2023
ದಿನಾಂಕ: 31 ನೇ ಅಕ್ಟೋಬರ್ 2023

**ವಾದಿಃ**

ಮಹಮ್ಮದ್ ಇಲಿಯಾಸ್ ಶೇಖ್ ಹುಸೇನ್

–ವಿರುದ್ಧ–

**ಪ್ರತಿವಾದಿಯರುಃ**

1. ಶ್ರೀಮತಿ ಖುತೇಜಾ ಹುಸೇನ್ ಶೇಖ್
ಹಾಗೂ ಇನ್ನೊಬ್ಬ

**ಮಧ್ಯಂತರ ಅರ್ಜಿ ನಂ. 1 ರ ಮೇಲೆ ಆದೇಶ**

**ಅರ್ಜಿದಾರರು /**
**ವಾದಿಃ**

ಮಹಮ್ಮದ್ ಇಲಿಯಾಸ್ ಶೇಖ್ ಹುಸೇನ್,
ವಯಸ್ಸುಃ 73 ವರ್ಷ, ಉದ್ಯೋಗಃ ವ್ಯವಹಾರ
ಸಾಃ ಕಾಕರಮಠ, ತಾಃ ಅಂಕೋಲಾ

**(ಶ್ರೀ ಹೆಚ್ .ಎಸ್ .ಎಸ್., ವಕೀಲರು)**

–ವಿರುದ್ಧ–

**ಎದುರುದಾರರು/**
**ಪ್ರತಿವಾದಿಯರುಃ**

1. ಶ್ರೀಮತಿ ಖುತೇಜಾ ಹುಸೇನ್ ಶೇಖ್
   ವಯಸ್ಸುಃ 65 ವರ್ಷ, ಉದ್ಯೋಗಃ ಮನೆವಾರ್ತೆ ,
   ಸಾಃ ಕಾಕರಮಠ, ತಾಃ ಅಂಕೋಲಾ

2. ಇಬ್ರಾಹಿಂ ಮಹಮ್ಮದ್ ಶೇಖ್,
   ವಯಃ 64, ಉಃವ್ಯವಹಾರ,
   ಸಾಃ ಕಾಕರಮಠ ತಾಃ ಅಂಕೋಲಾ

**( 1 ನೇ ಪ್ರತಿವಾದಿಯ ಪರವಾಗಿ ಶ್ರೀ ಎಂ.ಎ.ಆರ್., ವಕೀಲರು)**
**(2 ನೇ ಪ್ರತಿವಾದಿಯ ಪರವಾಗಿ ಶ್ರೀ ಎನ್.ಎಸ್. ಎನ್ ., ವಕೀಲರು)**

*****

**ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ –39 ನಿಯಮ–1 ಮತ್ತು 2 ರ ಜೊತೆಗೆ 151 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ. 1 ರ ಮೇಲೆ ಆದೇಶ**

ಅರ್ಜಿದಾರ/ವಾದಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ಪ್ರತಿವಾದಿಯರು, ಅವರ ಪರ ಜನ, ಏಜೆಂಟರು ಅಥವಾ ಅವರಡಿಯಲ್ಲಿ ಹಕ್ಕು ಸಾಧಿಸುವ ಯಾರೇ ವ್ಯಕ್ತಿಗಳು ವಾದಿಯನ್ನು ದಾವಾಸ್ತಿಯ ಕಬ್ಜೆಯಿಂದ ಹೊರಗೆ ಹಾಕದಂತೆ ಮಧ್ಯಂತರ ಮನಾಯಿ ಆದೇಶ ಕೇಳಿರುತ್ತಾರೆ.

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ಸ. ನಂ. 156 ಎ+ಬಿ +ಕೆ +ಡಿಎ +ಇ ವಿಸ್ತೀರ್ಣ 0–9–3 ಪೈಕಿ 0–0–6 ರಲ್ಲಿರುವ ಕಟ್ಟಡ ಸಂಖ್ಯೆ 5, ಟಿಎಂಸಿ ನಂ. 3229 ಇದು ದಾವಾಸ್ತಿಯಾಗಿರುತ್ತದೆಂದು ತಿಳಿಸಿರುತ್ತಾರೆ. ಸದರಿ ದಾವಾಸ್ತಿಯು ಒಬ್ಬ ಅಮೀನಾಬಿ ಕೋಂ ಶೇಖ್ ರವರ ಮಾಲೀಕತ್ವದ ಆಸ್ತಿ ಇದ್ದು, ವಾದಿ ದಾವಾಸ್ತಿಗೆ ಬಾಡಿಗೆದಾರನಾಗಿದ್ದನೆಂದು ತಿಳಿಸಿರುತ್ತಾರೆ. ಸದರಿ ಅಮೀನಾಬಿ ಮೃತಪಟ್ಟ ನಂತರ ಅವಳ ಗಂಡನಾದ ಶೇಖ್ ಉಸ್ಮಾನ ಶೇಖ್ ಕಮಲ್ ರವರನ್ನು ವಾದಿ ಹಾಗೂ ಅವಳ ಹೆಂಡತಿ ಎಲ್ಲ ರೀತಿಯಿಂದ ನೋಡಿಕೊಂಡು ಬಂದಿರುವುದರಿಂದ ದಾವಾಸ್ತಿ ಕುರಿತಾಗಿ ಮಾರ್ಚ 2004 ರಲ್ಲಿ ತೋಂಡಿ ಭಕ್ಷೀಸು ಮುಖಾಂತರ ವಾದಿಗೆ ನೀಡಿದ್ದಿರುತ್ತದೆ. ಕಾರಣ 2004 ರಿಂದ ತದನಂತರದ ದಿನಗಳಲ್ಲಿ ವಾದಿ ದಾವಾಸ್ತಿಗೆ ಮಾಲೀಕ ವ, ಕಬ್ಜಾದಾರನಾಗಿ ಮುಂದುವರೆದಿದ್ದು ಯಾವುದೇ ಬಾಡಿಗೆಯನ್ನು ಸಹ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ.

3. ಮುಂದುವರೆದು ದಾವಾಸ್ತಿಯ ಮಾಲೀಕತ್ವದ ಕುರಿತು ಹಾಗೂ ಮೊದಲಿನ ಮಾಲೀಕ ತೋಂಡಿ ಭಕ್ಷೀಸು ಮಾಡಿದ ಬಗ್ಗೆ ದಿಃ 03-03-2023 ರಂದು ವಾದಿ ಜನರ ತಿಳುವಳಿಕೆಗಾಗಿ ಪೇಪರ್ ಪ್ರಕಟಣೆ ಮಾಡಿದ್ದಿರುತ್ತದೆ. ನಂತರ ದಿಃ 07-03-2033 ರಂದು 1 ನೇ ಪ್ರತಿವಾದಿ ಕೆವಿಯಟ್ ನೋಟೀಸು ಕಳಿಸಿದ್ದು, ಅದರಲ್ಲಿ ದಾವಾಸ್ತಿಗೆ ದಿಃ 24-09-2006 ರಂದು ಆದ ವಿಲ್ ಪ್ರಕಾರ ತಾನೇ ಮಾಲೀಕಳಿರುತ್ತೇನೆಂದು 1 ನೇ ಪ್ರತಿವಾದಿ ತಿಳಿಸಿದ್ದು ಆ ಕುರಿತು 2 ನೇ ಪ್ರತಿವಾದಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ಹೆಚ್ಚುವರಿ ಸಿವಿಲ್ ನ್ಯಾಯಾಲಯ , ಅಂಕೋಲಾ ರವರಲ್ಲಿ ಸಲ್ಲಿಸಿದ ಮೂಲ ದಾವೆ ನಂ 1/2021 ರಲ್ಲಿ ರಾಜೀ ಡಿಕ್ರಿಯನ್ನು ಸಹ ಪಡೆದುಕೊಂಡಿದ್ದಿರುತ್ತದೆ. ಸದರಿ 1 ಮತ್ತು 2 ನೇ ಪ್ರತಿವಾದಿ ದಾವಾಸ್ತಿ ಕಬಳಿಸಬೇಕೆಂದು ಮೃತ ಶೇಖ್ ಉಸ್ಮಾನ ಶೇಖ್ ಕಮಲ್ ರವರ ಸಹಿಯನ್ನು ಫೋರ್ಜರಿ ಮಾಡಿ ಮೃತ್ಯುಪತ್ರ ಸೃಷ್ಟಿಸಿ ಸಿವಿಲ್ ನ್ಯಾಯಾಲಯದಿಂದ ವಿಚಾರಣೆಗೊಳಪಡದೇ ರಾಜೀ ಡಿಕ್ರಿ ಪಡೆದಿರುತ್ತಾರೆಂದು ತಿಳಿಸಿರುತ್ತಾರೆ.

4. ಮುಂದುವರೆದು ವಾದಿಯು ದಾವಾಸ್ತಿಯಲ್ಲಿ 2004 ರವರೆಗೆ ಬಾಡಿಗೆದಾರನಿದ್ದು ತದನಂತರದಲ್ಲಿ ತೋಂಡಿ ಭಕ್ಷೀಸು ಪತ್ರದ ಪ್ರಕಾರ ಮಾಲೀಕ ವ ಕಬ್ಜಾದಾರನಿರುತ್ತಾನೆ. ಆದರೆ 1 ನೇ ಪ್ರತಿವಾದಿ ಮೂಲ ದಾವೆ ನಂ. 1/2021 ರಲ್ಲಿ ದಿಃ 13-08-2021 ರಂದು ಪಡೆದ ರಾಜೀ ಡಿಕ್ರಿಯ ಆದೇಶದ ಮೇಲೆ ದಾವಾಸ್ತಿಯಿಂದ ಹೊರ ಹಾಕಲು ದಿಃ 02-09-2023 ರಂದು ಬೆದರಿಕೆ

ಹಾಕಿರುತ್ತಾರೆ. ಕಾರಣ ಸದರಿ ರಾಜೀ ಡಿಕ್ರಿ ಶೂನ್ಯವಾಗಿರುತ್ತದೆ ಹಾಗೂ ವಾದಿಯ ಮೇಲೆ ಬಂಧನಕಾರಿಯಾಗಿರುವುದಿಲ್ಲವೆಂದು ಠರಾಯಿಸಿ ವಾದಿಯನ್ನು ದಾವಾಸ್ತಿಯ ಕಬ್ಜೆಯಿಂದ ಹೊರಹಾಕದಂತೆ ಪ್ರತಿವಾದಿಯರ ವಿರುದ್ಧ ಮನಾಯಿ ನೀಡಬೇಕೆಂದು ದಾವೆಯಲ್ಲಿ ವಿನಂತಿಸಿರುತ್ತಾರೆ.

5. ಸದರಿ ಅರ್ಜಿಗೆ ಪ್ರತಿವಾದಿ 1 ಮತ್ತು 2 ರವರು ಪ್ರತ್ಯೇಕ ತಕರಾರನ್ನು ಸಲ್ಲಿಸಿರುತ್ತಾರೆ. 1 ನೇ ಪ್ರತಿವಾದಿಯು ತಾನು ಸಲ್ಲಿಸಿದ ಪ್ರತಿವಾದಪತ್ರದಲ್ಲಿಯ ವಿಷಯಗಳನ್ನು ಮಧ್ಯಂತರ ಅರ್ಜಿ ನಂ. 1 ಕ್ಕೆ ತಕರಾರು ಎಂದು ಪರಿಗಣಿಸಲು ವಿನಂತಿಸಿರುತ್ತಾರೆ.

6. 1 ನೇ ಪ್ರತಿವಾದಿಯು ದಾವೆಯಲ್ಲಿ ತಿಳಿಸಿದ ಎಲ್ಲ ವಿಷಯಗಳನ್ನು ಅಲ್ಲಗಳೆದಿರುತ್ತಾರೆ. ಮುಂದುವರೆದು ತಾನು ದಿವಂಗತ ಶೇಖ್ ಉಸ್ಮಾನ ಶೇಖ್ ಕಮಲ್ ರವರ ಚಿಕ್ಕಮ್ಮನ ಮಗಳಿದ್ದು , ಸಹೋದರ ಸಂಬಂಧಿಯಾಗಿರುತ್ತೇನೆ ಕಾರಣ ಶೇಖ್ ಉಸ್ಮಾನ ಶೇಖ್ ಕಮಲ್ ರವರು ದಿಃ 24-9-2006 ರಂದು ತನ್ನ ಹೆಸರಿನಲ್ಲಿ ಮೃತ್ಯುಪತ್ರ ಬರೆದಿದ್ದು, ಈ ಕುರಿತು ಮೂಲ ದಾವೆ ನಂ. 1/2021 ರಲ್ಲಿ ರಾಜೀ ಡಿಕ್ರಿಯಾಗಿರುತ್ತದೆ. ಕಾರಣ ವಾದಿ ಸಲ್ಲಿಸಿದ ದಾವೆ ಸುಳ್ಳು ದಾವೆಯಾಗಿರುತ್ತದೆಂದು ತಿಳಿಸಿರುತ್ತಾರೆ.

7. ಮುಂದುವರೆದು ದಿಃ 03-03-2023 ರಂದು ವಾದಿಯು ಕರಾವಳಿ ಮುಂಜಾವು ದಿನಪತ್ರಿಕೆಯಲ್ಲಿ ಸಾರ್ವಜನಿಕ ತಿಳುವಳಿಕೆ ನೋಟೀಸು ನೀಡಿ ಶ್ರೀ ಉಸ್ಮಾನ್ ಶೇಖ್ ಕಮಲ್ ಶೇಖ್ ರವರು 2007 ರಲ್ಲಿ ಅವಿವಾಹಿತರಾಗಿ ಮೃತಪಟ್ಟಿದ್ದು, ಅವರ ಆಸ್ತಿಯ ಕುರಿತಾಗಿ ಯಾರುಾ ಯಾವುದೇ ರೀತಿಯ ವ್ಯವಹಾರ ಮಾಡದಂತೆ, ಒಂದು ವೇಳೆ ಆ ರೀತಿ ವ್ಯವಹಾರ ಮಾಡಿದರೆ ಅದಕ್ಕೆ ಅವರೇ ಲುಕ್ಸಾನಿಗೆ ಹೊಣೆಗಾರರಾಗಿರುತ್ತಾರೆಂದು ಸುಳ್ಳು ನೋಟೀಸು ನೀಡಿ ಆಧಾರರಹಿತ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಈ ದಾವೆ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

8. ಮುಂದುವರೆದು ವಾದಿಯು ದಾವಾಸ್ತಿಯ ಎದುರುಗಡೆ ಇರುವ ಫೂಟ್ ಪಾತ್ ನಲ್ಲಿ ತರಕಾರಿ ವ್ಯಾಪಾರ ಮಾಡುತ್ತಿದ್ದು ಮಳೆಗಾಲದಲ್ಲಿ ಮಳೆಯಿಂದ ರಕ್ಷಣೆ ಪಡೆಯುವ ಉದ್ದೇಶದಿಂದ ದಾವಾಸ್ತಿಯ ಜಗಲಿಯ ಒಂದು ಮೂಲೆಯಲ್ಲಿ ಹಂಗಾಮಿ ತರಕಾರಿ ವ್ಯಾಪಾರ ಮಾಡುತ್ತಿದ್ದು, ದಾವಾಸ್ತಿಗಾಗಲೀ ಅಥವಾ ವಾದಿಗಾಗಲೀ ಯಾವುದೇ ಹಕ್ಕು ವ, ಸಂಬಂಧ ಇರುವುದಿಲ್ಲ. ವಾದಿಯು ಬೀದಿ ಬದಿಯಲ್ಲಿ ನಡೆಸುತ್ತಿರುವ ವ್ಯಾಪಾರ ಮಾಡುತ್ತಿದ್ದು ಆತನಿಗೆ ಪುರಸಭೆ ಅಥವಾ ಇನ್ನಿತರ ಸೂಕ್ತ ಪರವಾನಿಗೆ ಸಹ ಇರುವುದಿಲ್ಲ. ಶೇಖ್ ಉಸ್ಮಾನ ಕಮಲ್ ವ , ಅವರ ಹೆಂಡತಿಯು ವಾದಿಯಿಂದ ದಿನಬಾಡಿಗೆ ಅಥವಾ ತಿಂಗಳ ಬಾಡಿಗೆ ಪಡೆದಿರುವುದಿಲ್ಲ. ವಾದಿ ಹಾಗೂ ಆತನ ಹೆಂಡತಿ ಯಾವ ಕಾಲದಲ್ಲಿಯೂ ಶೇಖ್ ಉಸ್ಮಾನ ಶೇಖ್

ಕಮಲ್ ರವರ ಊಟೋಪಚಾರ ಅಥವಾ ಔಷದೋಪಚಾರ ಮಾಡಿರುವುದಿಲ್ಲ ಹಾಗೂ ತನ್ನ ಜೀವಿತ ಕಾಲದಲ್ಲಿ ವಾದಿ ಹೆಸರಿನಲ್ಲಿ ದಾವಾಸ್ತಿ ಕುರಿತಂತೆ ಯಾವುದೇ ಕಾಗದಪತ್ರವನ್ನು ಬರೆದುಕೊಟ್ಟಿರುವುದಿಲ್ಲ ವ ಮೌಖಿಕವಾಗಿ ಯಾವುದೇ ಆಶ್ವಾಸನೆ ನೀಡಿರುವುದಿಲ್ಲವೆಂದು ತಿಳಿಸಿ ದಾವೆಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

9. 2 ನೇ ಪ್ರತಿವಾದಿಯು ಸಹ ಮಧ್ಯಂತರ ಅರ್ಜಿಗೆ ಪ್ರತ್ಯೇಕ ತಕರಾರು ಸಲ್ಲಿಸಿ ದಾವಾಸ್ತಿಯು ಯಾವ ಗ್ರಾಮದ ಸ ನಂ. ನಲ್ಲಿ ಇದೆ ಎಂದು ಸ್ಪಷ್ಟಪಡಿಸಿರುವುದಿಲ್ಲ. ವಾದಿ ದಾವಾಸ್ತಿಯ ಕಬ್ಜೆಯನ್ನು ಯಾವತ್ತೂ ಹೊಂದಿರುವುದಿಲ್ಲ. ವಾದಿಯು ರಸ್ತೆಯ ಬದಿಯ ಕಾಯಿಪಲ್ಲೆ ಮಾರಾಟ ಮಾಡುವ ಹಂಗಾಮಿ ಮಾರಾಟಗಾರನಿರುತ್ತಾನೆ. ಕಾರಣ ಸದರಿ ಶೇಖ್ ಅಹಮ್ಮದ್‌ನಿಗೆ ಹೆಂಡತಿ–ಮಕ್ಕಳು ಇರುವುದಿಲ್ಲ ಎಂದು ತಿಳಿದುಕೊಂಡು ದಾವಾಸ್ತಿ ಕಬಳಿಸಲು ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ದಾವೆಯಲ್ಲಿಯ ಸಂಗತಿಗಳನ್ನು ಪುಷ್ಟೀಕರಿಸಲು ವಾದಿ ಯಾವುದೇ ಪೂರಕ ಸಾಕ್ಷ್ಯಾಧಾರಗಳನ್ನು ನೀಡಿರುವುದಿಲ್ಲ. ದಾವಾಸ್ತಿಯನ್ನು ಈಗಾಗಲೇ 1 ನೇ ಪ್ರತಿವಾದಿಯು ಇ–ಸ್ವತ್ತನ್ನಾಗಿ ಮಾಡಿಕೊಂಡಿರುತ್ತಾರೆ ಹಾಗೂ ಕಾಲಕಾಲಕ್ಕೆ ಕರಗಳನ್ನು ತುಂಬುತ್ತಾ ಬಂದಿರುತ್ತಾರೆ. ಕಾರಣ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

**10.** ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ, ವಾದಿ ಪರ ನಿರ್ಧರಿತ ಪ್ರಕರಣ ಹಾಗೂ ದಾಖಲೆಗಳನ್ನು ನೀಡಿರುತ್ತಾರೆ. ಪ್ರಕರಣದಲ್ಲಿ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ........

**ಅಂಶಗಳು**

1. ಮೇಲ್ನೋಟಕ್ಕೆ ದಾವೆ ತಮ್ಮ ಪರವಾಗಿರುತ್ತದೆಂದು ವಾದಿ ಸಾಬೀತುಪಡಿಸುತ್ತಾರೆಯೇ ?

2. ತುಲನಾತ್ಮಕವಾದ ವಿವಾದಾಂಶಗಳು ತನ್ನ ಪರವಾಗಿರುತ್ತವೆಂದು ವಾದಿ ಸಾಬೀತುಪಡಿಸುತ್ತಾರೆಯೇ?

3. ಮಧ್ಯಂತರ ಅರ್ಜಿ ನಂ. 1 ರಲ್ಲಿ ಕೇಳಿದ ಪರಿಹಾರವನ್ನು ನೀಡದಿದ್ದರೆ, ವಾದಿಗೆ ತುಂಬಲಾರದ ಹಾನಿ ವ, ಲುಕ್ಸಾನು ಉಂಟಾಗುತ್ತದೆ ಎಂದು ಸಾಬೀತುಪಡಿಸುತ್ತಾರೆಯೇ?

4. ಯಾವ ಆದೇಶ ?

**11.** ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ
ಅಂಶ ನಂ. 2: ನಕಾರಾತ್ಮಕ
ಅಂಶ ನಂ. 3: ನಕಾರಾತ್ಮಕ
ಅಂಶ ನಂ. 4: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

**ಕಾರಣಗಳು**

12. **ಅಂಶ ನಂ.1 ರಿಂದ 3**:- ಸದರಿ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟವುಗಳಾಗಿರುವುದರಿಂದ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

13. ನಿರ್ದಿಷ್ಟ ಪರಿಹಾರ ಅಧಿನಿಯಮ- 36 ರ ಪ್ರಕಾರ ವ್ಯಕ್ತಿಯ ನ್ಯಾಯಬದ್ಧ ಹಕ್ಕಿನ ಉಲ್ಲಂಘನೆ ಆಗುತ್ತಿದ್ದರೆ ಅಥವಾ ಉಲ್ಲಂಘನೆಯಾಗುವ ಸಂಭವವಿದ್ದಾಗ ನಿರಂತರ ಮನಾಯಿ ಆದೇಶ ಹಾಗೂ ಮಧ್ಯಂತರ ಮನಾಯಿ ಆದೇಶ ಪಡೆಯಲು ಅವಕಾಶವಿರುತ್ತದೆ. ಸದರಿ ನಿರ್ಬಂಧಕಾಜ್ಞೆ ನೀಡುವ ಸಮಯದಲ್ಲಿ ನ್ಯಾಯಾಲಯವು ತನ್ನ ವಿವೇಚನೆಯಿಂದ ನ್ಯಾಯಿಕ ತಳಹದಿಯನ್ನು ಆಧರಿಸಿ ಆದೇಶ ನೀಡಬೇಕಾಗುತ್ತದೆ. ಅದು ಅಲ್ಲದೆ ನಿರ್ಬಂಧಕಾಜ್ಞೆ ನೀಡುವ ಸಮಯದಲ್ಲಿ ವಾದಿ ಹಕ್ಕು ಉಲ್ಲಂಘನೆಯಾಗಿದೆಯೇ ಹಾಗೂ ಹಕ್ಕು ಉಲ್ಲಂಘನೆಗೆ ನಿರ್ಬಂಧಕಾಜ್ಞೆ ನೀಡುವುದು ಅತೀ ಸೂಕ್ತವಾದ ಪರಿಹಾರೋಪಾಯ ಎಂದೆನಿಸುವುದು ಎಂಬುವುದನ್ನು ಮತ್ತು ಸಮಾನಾಂತರ ಪರಿಹಾರ ಲಭ್ಯವಿದ್ದಲ್ಲಿ ನ್ಯಾಯಾಲಯವು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಲು ನಿರಾಕರಿಸಬಹುದಾಗಿದೆ. ಅದು ಅಲ್ಲದೆ ತಾತ್ಕಾಲಿಕ ಮಧ್ಯಂತರ ಮನಾಯಿ ನೀಡುವ ಆದೇಶವು ದಾವೆಯಲ್ಲಿ ಕೇಳಿದ ಮೂಲ ಮಾಗಣೆಗೆ ಪೂರಕವಾಗಿದೆಯೇ ಎಂಬುವುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ.

14. ಈ ಹಿನ್ನೆಲೆಯಲ್ಲಿ ಪ್ರಸ್ತುತ ವಾದಿ ಕೇಳಿದ ಮಾಗಣಿ ಅವಲೋಕಿಸಲು ಸದರಿ ದಾವಾಸ್ತಿಗೆ ತಾನು ತೋಂಡಿ ಭಕ್ಷೀಸು ಮುಖಾಂತರ ಮಾಲೀಕ ವ, ಕಬ್ಜಾದಾರನಿರುತ್ತೇನೆಂದು ತಿಳಿಸಿರುತ್ತಾರೆ. ಸದರಿ ವಾದಿ-ಪ್ರತಿವಾದಿಯರು ಮಹಮದೀಯ ಕಾನೂನಿಗೆ ಒಳಪಟ್ಟಿರುವುದರಿಂದ ತೋಂಡಿ ಭಕ್ಷೀಸು ಮೂಲಕ ಆಸ್ತಿಯನ್ನು ವರ್ಗಾವಣೆ ಮಾಡಲು ಹಾಗೂ ಪಡೆಯಲು ಅವಕಾಶವಿರುತ್ತದೆ. ಆದರೆ ಸದರಿ ತೋಂಡಿ ಭಕ್ಷೀಸು ಮುಖಾಂತರ ಪಡೆದ ಆಸ್ತಿಯ ಕುರಿತಾಗಿ ದಾವಾಸ್ತಿಯ ಕಂದಾಯ ದಾಖಲೆಗಳಲ್ಲಿ ಹಕ್ಕು ಬದಲಾವಣೆ ಹಾಗೂ ಮಹಮದೀಯ ಕಾನೂನಿನ ಪ್ರಕಾರ ತೋಂಡಿ ಭಕ್ಷೀಸು ಮಾಡುವ ಸಮಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳನ್ನು ಅನುಸರಿಸಿದೆ ಎಂಬುವುದನ್ನು ವಾದಿ ಸಾಬೀತುಪಡಿಸಬೇಕಾಗುತ್ತದೆ.

15. ದಾವಾಸ್ತಿಯ ಕುರಿತಾಗಿ ತೋಂಡಿ ಭಕ್ಷೀಸು ಕುರಿತಾಗಿರುವ ಕ್ರಮ ಕೈಗೊಳ್ಳಲಾಗಿದೆಯೇ ಎಂಬುವುದನ್ನು ಅವಲೋಕಿಸಿದಾಗ ವಾದಿ ಯಾವ ದಿನಾಂಕದಂದು ತೋಂಡಿ ಭಕ್ಷೀಸು ಆಗಿದೆ ಎಂದು ನಿರ್ದಿಷ್ಟ ದಿನಾಂಕ ತಿಳಿಸದೇ ಮಾರ್ಚ ತಿಂಗಳ 2004 ಎಂದು ಅಂದಾಜು ದಿನಾಂಕವನ್ನು ಹಾಕಿದ್ದು ಕಂಡುಬರುತ್ತದೆ. ಕಾರಣ ತೋಂಡಿ ಭಕ್ಷೀಸು ಕುರಿತಾಗಿ ಸ್ಪಷ್ಟವಾದ ಚಿತ್ರಣವನ್ನು ನೀಡದ ಹೊರತು ಹಾಗೂ ಸಾಕ್ಷ್ಯಾಧಾರ ಪಡೆಯದ ಹೊರತು ವಾದಿ ತೆಗೆದುಕೊಂಡ ನಿಲುವನ್ನು ನಿರ್ಧರಿಸಲು ಆಗದು.

**16.** ಸದರಿ ವಾದಿ ದಾವೆ ದಾಖಲಿಸುವ ದಿನದಂದು ದಾವಾಸ್ತಿಯ ಕಬ್ಜಾ ವಹಿವಾಟಿಯಲ್ಲಿರುತ್ತಾನೆಯೇ ಎಂಬುವುದನ್ನು ಅವಲೋಕಿಸಿದಾಗ ಈ ಕುರಿತು ವಾದಿ-ಪ್ರತಿವಾದಿಯರು ದಾವಾಸ್ತಿಗೆ ಸಂಬಂಧಿಸಿದ ಭಾವಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಅವಲೋಕಿಸಿದಾಗ ಕಾಯಿಪಲ್ಲೆ ಮಾರುವುದು ಕಂಡುಬರುತ್ತದೆ. ವಾದಿ ತಾನು 2004 ರವರೆಗೆ ದಾವಾಸ್ತಿಯ ಬಾಡಿಗೆದಾರನಿದ್ದು, ತದನಂತರದಲ್ಲಿ ತೋಂಡಿ ಭಕ್ಷೀಸು ಮುಖಾಂತರ ಮಾಲೀಕ ವ, ಕಬ್ಜಾದಾರನಿರುತ್ತೇನೆಂದು ತಿಳಿಸಿರುತ್ತಾರೆ . ಸದರಿ ಸಂಗತಿಯ ಸಾಬೀತಿಗಾಗಿ ಮೂಲ ದಾವೆ ನಂ. 71/2001 ರಲ್ಲಿ ದಿಃ 07-11-2001 ರಲ್ಲಿ ಆದ ರಾಜೀ ಡಿಕ್ರಿ ಪ್ರತಿ ಹಾಜರುಪಡಿಸಿದ್ದು, ಅದರಲ್ಲಿ ಅಂಕೋಲಾ ತಾಲೂಕಿನ ಶೆಡಗೇರಿ ಗ್ರಾಮದ ಜಮೀನು ಸ. ನಂ. 438 ರಲ್ಲಿಯ 20- ಗುಂಟೆ ಆಸ್ತಿಯಲ್ಲಿರುವ ಟಿಎಂಸಿ ಕಟ್ಟಡ ನಂ.3229/3003 ರ ಇಮಾರತಿಯ ಎದುರುಗಡೆ ಇದ್ದ ಪೂರ್ವ-ಪಶ್ಚಿಮ 3-ಪೂಟ ಹಾಗೂ ದಕ್ಷಿಣ-ಉತ್ತರ 5 -ಫೂಟ ವರಾಂಡ ಜಾಗೆಯಲ್ಲಿ ವಾದಿ ಪ್ರತಿ ತಿಂಗಳು 30 ರೂ. ಬಾಡಿಗೆ ಕೊಡುವ ಕರಾರಿನ ಮೇರೆಗೆ ಉಳಿದಿರುವುದು ಕಂಡುಬರುತ್ತದೆ. ಆದರೆ ಪ್ರಸ್ತುತ ದಾವೆಯಲ್ಲಿಯ ದಾವಾಸ್ತಿ ಸ. ನಂ. 156A+B+K+DA+E ರಲ್ಲಿಯ 0-9-3 ಆಸ್ತಿಯ ಪೈಕಿ 0-0-6 ಕುರಿತಾಗಿ ಮಾಗಣಿ ಮಾಡಿರುತ್ತಾರೆ. ಕಾರಣ ಸದರಿ ಮೂಲ ದಾವೆ ನಂ. 71/2001 ರಲ್ಲಿ

ತಿಳಿಸಿದ ದಾವಾಸ್ತಿಗೂ ಹಾಗೂ ಪ್ರಸ್ತುತ ದಾವೆಯಲ್ಲಿಯ ದಾವಾಸ್ತಿಗೂ ಒಂದಕ್ಕೊಂದು ತಾಳೆಯಾಗುವುದಿಲ್ಲ.

**17.** ವಾದಿ 2004 ರಲ್ಲಿ ತೋಂಡಿ ಭಕ್ಷೀಸು ಮುಖಾಂತರ ದಾವಾಸ್ತಿ ಪಡೆದಿರುವುದಾಗಿ ತಿಳಿಸಿದ್ದರೂ ಸಹ ದಾವಾಸ್ತಿಯು ಇದುವರೆಗೂ ಮೂಲ ಮಾಲೀಕಳಾದ ಖತೇಜ ಶೇಖ್ ಗಂಡ ಹುಸೇನ್ ಶೇಖ್ ರವರ ಹೆಸರಿನಲ್ಲಿರುವುದು 1 ನೇ ಪ್ರತಿವಾದಿಯ ಪರ ಹಾಜರುಪಡಿಸಿದ ದಾಖಲೆಗಳಿಂದ ಕಂಡುಬರುತ್ತದೆ. ಸದರಿ ಪ್ರತಿವಾದಿಯರು ಮೃತ್ಯುಪತ್ರವನ್ನು ಸೃಷ್ಟಿಸಿ ಅದರ ಮೇಲೆ ರಾಜೀ ಡಿಕ್ರಿ ಮಾಡಿಕೊಂಡಿರುತ್ತಾರೆ, ಆದರೆ ಮಹಮದೀಯ ಕಾನೂನಿನ ಪ್ರಕಾರ 1/3 ಕ್ಕಿಂತ ಹೆಚ್ಚಿನ ಆಸ್ತಿಯ ಕುರಿತಾಗಿ ವ್ಯಕ್ತಿ ಮೃತ್ಯುಪತ್ರ ಮಾಡಲು ಅವಕಾಶವಿರುವುದಿಲ್ಲ. ಕಾರಣ ಸದರಿ ಮೃತ್ಯುಪತ್ರ ಕಾಯ್ದೆಯಡಿಯಲ್ಲಿ ಊರ್ಜಿತಗೊಳ್ಳುವುದಿಲ್ಲವೆಂದು ವಾದಮಂಡಿಸಿ ಈ ಕುರಿತು ಗೌರವಾನ್ವಿತ ಮದರಾಸ್ ಉಚ್ಚ ನ್ಯಾಯಾಲಯದ ಅಪೀಲು ದಾವೆ ನಂ. 76/1999, ದಿಃ 5-5-2017 ರ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

**18.** ವಾದಿ ದಾವಾಸ್ತಿಯ ಪ್ರತ್ಯಕ್ಷ ಕಬ್ಜಾ ವಹಿವಾಟಿ ಇರುವ ಕುರಿತು ಪೂರಕ ಸಾಕ್ಷ್ಯಾಧಾರ ನೀಡಬೇಕಾಗುತ್ತದೆ ವಿನಃ ಪ್ರತಿವಾದಿಯ ಪ್ರಕರಣದ ಊರ್ಜಿತತೆ ಕುರಿತು ಪ್ರಶ್ನಿಸಲು ಈ ಹಂತದಲ್ಲಿ ಅವಕಾಶವಿರುವುದಿಲ್ಲ. ಕಾರಣ ಸಾಕ್ಷ್ಯಾಧಾರ

ಪಡೆಯದೇ ಮಧ್ಯಂತರ ಮನಾಯಿ ಆದೇಶ ಮಾಡುವುದರಿಂದ ಆಸ್ತಿಯ ಪ್ರತ್ಯಕ್ಷ ಕಬ್ಜಾ ವಹಿವಾಟಿ ಪರಿಗಣಿಸದೇ ಅಂತಿಮ ಆದೇಶವನ್ನು ನೀಡಿದಂತಾಗುತ್ತದೆ. ಆದ್ದರಿಂದ ಮೇಲ್ನೋಟಕ್ಕೆ ದಾವೆ ವಾದಿ ಪರವಾಗಿರುತ್ತದೆಂದು ಸಾಬೀತುಪಡಿಸಿದರೂ ಸಹ ತುಲನಾತ್ಮಕ ವಿವಾದಾಂಶಗಳು ವಾದಿ ಪರವಾಗಿರುವುದಿಲ್ಲ. ಒಂದು ವೇಳೆ ಮಧ್ಯಂತರ ಮನಾಯಿ ಆದೇಶ ನೀಡಿದರೆ ಪ್ರತಿವಾದಿಯರಿಗೆ ತುಂಬಲಾರದ ಹಾನಿ ವ, ಲುಕ್ಸಾನು ಉಂಟಾಗುವ ಸಾಧ್ಯತೆ ಇರುತ್ತದೆ. ಕಾರಣ ಅಂಶ ನಂ. 1 ಕ್ಕೆ " **ಸಕಾರಾತ್ಮಕ**" ಹಾಗೂ 2 ಮತ್ತು 3 ಕ್ಕೆ " **ನಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

19. **ಅಂಶ ನಂ. 4**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**ಆದೇಶ**

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ-39 ನಿಯಮ-1 ಮತ್ತು 2 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ. 1 ನ್ನು ವಜಾಗೊಳಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿದ ನಂತರ ಅದನ್ನು ಓದಿ ತಿದ್ದುಪಡಿ ಮಾಡಿ ನಂತರ ಅದನ್ನು ಇಂದು ದಿನಾಂಕ 31 ನೇ ಅಕ್ಟೋಬರ್ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

Digitally signed by
PRASHANT BADAWADAGI

**( ಪ್ರಶಾಂತ ಬಾದವಾಡಗಿ )**

ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,

ಅಂಕೋಲಾ.

<u>**ಪ್ರತ್ಯೇಕವಾಗಿ ಆದೇಶವನ್ನು**</u>
<u>**ತೆರೆದ ನ್ಯಾಯಾಲಯದಲ್ಲಿ ಘೋಷಿಸಿಲಾಯಿತು**</u>

## ಆದೇಶ

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ–39 ನಿಯಮ–1 ಮತ್ತು 2 ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ನಂ. 1 ನ್ನು ವಜಾಗೊಳಿಸಲಾಗಿದೆ.

2 ನೇ ಪ್ರತಿವಾದಿಯ ಪ್ರತಿವಾದಪತ್ರಕ್ಕಾಗಿ ಪ್ರಕರಣವನ್ನು ದಿಃ 6–11–2023 ರಂದು ಕರೆಯಿರಿ.

**ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ಅಂಕೋಲಾ.**